**ಸಾಕ್ಷಿಯನ್ನು ದಿಃ 15.07.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ಬಾಲಕೃಷ್ಣ ರವರ ಮಗಳನ್ನು ನನ್ನ ಮಗನಿಗೆ ತಂದುಕೊಂಡಿದ್ದೇವೆ. ವಾದಿ, ಪ್ರತಿವಾದಿಗಳು ಹಾಗೂ ನಾನು ಒಂದೇ ಊರಿನವರು ಎಂದರೆ ಸರಿ.

2. ನನ್ನ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳು ನನಗೆ ಗೊತ್ತು. ಮಂಜುನಾಥಸ್ವಾಮಿ ಕಛೇರಿಯಲ್ಲಿ ನಾನೇ ಬರೆಸಿದ್ದು, ಅದರಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ.

3. ಪಾಲುಪಾರಿಕತ್ತು ಪ್ರಕಾರ 25 ಗುಂಟೆ ಕಮ್ಮಿ ಆಗಿದೆ ಎಂದು ಖಾತೆ ಮಾಡಿಸಿಕೊಡುವಂತೆ ವಾದಿ ಈ ದಾವೆ ಹಾಕಿದ್ದಾರೆ. ಯಾವ ಸರ್ವೇ ನಂಬರ್ ಎಂದು ನನಗೆ ಗೊತ್ತಿಲ್ಲ.

4. ಪಾಲುಪಾಕತ್ತು 2004 ರಲ್ಲಿ ಆಗಿದೆ. ತಿಂಗಳು ಹಾಗೂ ದಿನಾಂಕ ಗೊತ್ತಿಲ್ಲ.

5. ಒಟ್ಟು ಎಷ್ಟು ಎಕರೆಗೆ ವಿಭಾಗ ಮಾಡಿಕೊಂಡಿರುತ್ತಾರೆ ಎಂದು ಗೊತ್ತಿಲ್ಲ.

6. ವಿಭಾಗ ಪತ್ರ ಆಗುವ ಮುಂಚೆ ಊರಿನಲ್ಲಿ ನ್ಯಾಯ ಪಂಚಾಯತಿ ಆಗಿಲ್ಲ.

7. ದಾವಾ ಜಮೀನಿನ ಅಕ್ಕಪಕ್ಕ ನನಗೆ ಜಮೀನು ಇರುವುದಿಲ್ಲ.

8. ವಿಭಾಗ ಪತ್ರಕ್ಕೆ ನಾನು ತಾಲೂಕು ಕಛೇರಿಯಲ್ಲಿ ಸಹಿ ಮಾಡಿರುತ್ತೇನೆ. ಅದನ್ನು ಯಾರು ತಯಾರಿಸಿದ್ದರು ಎಂದು ಗೊತ್ತಿಲ್ಲ.

9. ವಿಭಾಗ ಪತ್ರಕ್ಕೆ ನಾನು, ಸ್ವಾಮಿಗೌಡ, ಪುಟ್ಟೇಗೌಡ, ರಾಮಚಂದ್ರ ಶೆಟ್ಟರು ಹಾಗೂ ಇನ್ನೊಬ್ಬ ಸ್ವಾಮಿಗೌಡ ಸಾಕ್ಷಿಯಾಗಿ ಸಹಿ ಹಾಕಿರುತ್ತೇವೆ.

10. ಸದರಿ ವಿಭಾಗ ಪತ್ರ ನೊಂದಣಿಯಾಗಿದೆ. ಯಾವ ದಿನಾಂಕದಂದು ಆಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಯಾವ ದಿನಾಂಕ ಸಹಿ ಹಾಕಿದ್ದೆ ಎಂದು ಈಗ ನೆನಪಿಲ್ಲ.

11. ದಾವಾ ಸ್ವತ್ತಿನ ಬಗ್ಗೆ ನಿಮಗೆ ಮಾಹಿತಿ ಇಲ್ಲದಿದ್ದರೂ, ಪ್ರತಿವಾದಿಗಳಿಗೆ ತೊಂದರೆಯಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.) ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಪಿರಿಯಾಪಟ್ಟಣ